ಅಂಥವನಿಗೆ ಎರಗುವುದು ಅಂಜುಬುರುಕುತನವಲ್ಲವೇ? ಎನ್ನುತ್ತಾನೆ. ತತ್ಪರಿಣಾಮದಿಂದಾಗಿ ಭರತ–ಬಾಹುಬಲಿಯ ಮಧ್ಯೆ ಯುದ್ಧ ಏರ್ಪಡುತ್ತದೆ. ಮಂತ್ರಿ ಮುಖ್ಯರು ಸೇರಿ ಯುದ್ಧ ವಿನಾಶಕರವಾದುದಾಗುತ್ತದೆ ಎಂದು ಸೂಚಿಸುತ್ತಾರೆ. ಅಂತಿಮವಾಗಿ ಧರ್ಮಯುದ್ಧಕ್ಕೆ ಅವಕಾಶವನ್ನು ಕಲ್ಪಿಸಲಾಗುತ್ತದೆ. ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳು ಏರ್ಪಡುತ್ತವೆ. ಕರೆದೊಡೆ ಕಾರ್ಯವೇನು, ಜೀಯ, ದೇವ, ಅರಸ ಎನ್ನಲು ನಾನು ಸಿದ್ಧನಿಲ್ಲ. ಪುರುದೇವನಿಂದ ಬಂದಿರುವ ನೆಲಕ್ಕೆ ಯಾರೊಡನೆಯೂ ಸ್ಪರ್ಧೆ ಬೇಡವೆಂದು ಬಾಹುಬಲಿ ಯುದ್ಧ ಸನ್ನದ್ಧನಾಗುವನು.

ರಾಜ್ಯಗಳ ನಡುವೆ ನಡೆಯುವ ಯುದ್ಧಗಳಿಂದ ಜನರ ಹಿಂಸೆಯಾಗುತ್ತದೆ ಎಂದು ತಿಳಿದು, ಮಂತ್ರಿಗಳು–ಪಂಡಿತರು ಹೇಳಿದ ಸಲಹೆಯನ್ನು ಒಪ್ಪಿ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧದಲ್ಲಿ ಭರತ ಬಾಹುಬಲಿ ಹೋರಾಡುತ್ತಾರೆ. ಒಂದೊಂದು ಯುದ್ಧದ ವರ್ಣನೆಗಳೂ ಅನನ್ಯವಾಗಿವೆ. ದೃಷ್ಟಿಯುದ್ಧ, ಜಲಯುದ್ಧದಲ್ಲಿ ಜಯಿಸಿದ ಬಾಹುಬಲಿ ಮಲ್ಲಯುದ್ಧದಲ್ಲೂ ಗೆದ್ದಿದ್ದಾನೆ. ಆದರೆ ಭರತನನ್ನು ಮೇಲೆತ್ತಿ ಇನ್ನೇನು ನೆಲಕ್ಕೆ ಕುಕ್ಕಬೇಕು ಎನ್ನುವಷ್ಟರಲ್ಲಿ ಆತನಿಗೆ ಹೀಗೆನಿಸುತ್ತದೆ:

ಕನಕಾಚಲಮಂ ಪೊತ್ತುದು । ಘನಮರಕತ ಶೈಲಮೆನಿಸಿ ಭುಜಬಲಿ ಸಕಲಾ
ವನಿತಲ ವಲ್ಲಭನಂ ಭೋಂ । ಕನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್

ಭರತಾವನೀಶ್ವರಂ ಗುರು । ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ
ದೊರೆಯನುಮನಳವಟಿಯೆ ವಸುಂ । ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ



ರತ್ನ ಪರ್ವತ–ಕನಕ ಪರ್ವತವನ್ನು ಹೊತ್ತುಕೊಂಡಿದೆ ಎನ್ನುವ ಹಾಗೆ, ಬಾಹುಬಲಿ ಭೂಮಿಗೆ ಒಡೆಯನಾದ ಭರತಚರ್ಕವರ್ತಿಯನ್ನು ಭೋಂಕನೆ ಎತ್ತಿ ಹಿಡಿದು, ನೆಲದ ಮೇಲೆ ಹಾಕಲು ಇಷ್ಟ ಪಡದೆ ಹೊತ್ತೇ ನಿಂತಿದ್ದಾನೆ. 'ಭರತನು ನನ್ನ ದೊಡ್ಡಣ್ಣ, ಗುರುಸ್ಥಾನೀಯ, ಚಕ್ರವರ್ತಿ, ಮಹಿಮೆಗೆ ಆಗರ, ಶಕ್ತಿಯಳಿದ ಈ ರಾಜನನ್ನು ಭೂಮಿಯ ಮೇಲೆ ಎಸೆದು ಅದೇಕೆ ಅವಮಾನವನ್ನು ಮಾಡಲಿ?' ಎಂದು ಆಲೋಚಿಸಿ, ಭರತನನ್ನು ಮೆಲ್ಲಗೆ ನೆಲದ ಮೇಲೆ ಇಳಿಸುತ್ತಾನೆ. ಇದಿಷ್ಟು ಭರತ–ಬಾಹುಬಲಿ ಕಥೆಯೇನೋ ಸರಿ. ಆದರೆ ಬಾಹುಬಲಿ ಕೊನೆಗೆ ತೆಗೆದುಕೊಳ್ಳುವ ನಿರ್ಧಾರವಂತೂ ಅಪೂರ್ವವಾದುದು. ತಾನು ಗೆದ್ದ ರಾಜ್ಯವನ್ನು ಭರತನಿಗೆ ಕೊಟ್ಟು ಜೈನ ದೀಕ್ಷೆಯನ್ನು ಪಡೆದು ತಪಸ್ಸಿನಲ್ಲಿ ನಿರತನಾಗುತ್ತಾನೆ. ಬಾಹುಬಲಿಯ ವೈರಾಗ್ಯದ ನುಡಿಗಳಿವು:

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತು ದುಮನಾಂ ನಿನಗಿತ್ತೆ ನಿದೇವುದಣ್ಣನೀ
ನೋಲಿದ ಲತಾಂಗಿಗಂಧರೆ ಗಮಾಟಿಸಿದಂದು ನೆಗಳ್ತೆ ಮಾಸದೇ.